**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**MVC** – 577/2024 **PW**–2

**ದಿಃ 10.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎಂ ವೈ ಎ ವಕೀಲರಿಂದಃ**

ನಾನು ಈ ಅರ್ಜಿಯಲ್ಲಿ ಸಾಕ್ಷಿದಾರನಾಗಿದ್ದು, ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಈ ದಿನ ನ್ಯಾಯಾಲಯದ ಮುಂದೆ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ. ಅದರಲ್ಲಿರುವ ಸಹಿ ನನ್ನದು.

ನಾನು ನನ್ನ ವಿಚಾರಣೆಗೆ ಸಂಬಂಧಿಸಿದಂತೆ ಅಂಗನ್ಯೂನತಾ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಶಾನೆ ಪಿ 15 ಎಂದು ಹಾಗೂ ಸಾಕ್ಷಿದಾರರ ಸಹಿಯನ್ನು ನಿಶಾನೆ ಪಿ 15(ಎ) ಎಂದು, ಕ್ಯಾಷ ಬಿಲ್ ಹಾಗೂ ಡಿಸಚಾರ್ಜ ಸಮರಿ ಮತ್ತು ಒಂದು ಎಕ್ಸರೇ ಪಿಲ್ಮಂನ್ನು ಹಾಜರುಪಡಿಸಿದ್ದು ಅವುಗಳನ್ನು ನಿಶಾನೆ ಪಿ 16, ನಿಶಾನೆ ಪಿ 17 ಮತ್ತು ನಿಶಾನೆ ಪಿ 18 ಎಂದು ಗುರ್ತಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರ ಪರ ಶ್ರೀ ಎ ಎಂ ಎಸ ರವರಿಂದ.**

ನಾನು ಸುಮಾರು 15 ವರ್ಷಗಳಿಂದ ಶಕುಂತಲಾ ಆಸ್ಪತ್ರೆಯಲ್ಲಿ ವೈದ್ಯನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಅರ್ಜಿದಾರರ ಎಲ್ಲ ಚಿಕಿತ್ಸೆ ಎಸಡಿಎಂ ಆಸ್ಪತ್ರೆಯಲ್ಲಿ ಆಗಿದೆ ನಾನು ಕೇವಲ ಓಪಿಡಿ ಅಷ್ಟೆ ಕನ್ಸಲ್ಟ ಮಾಡಿರುತ್ತೇನೆಂದರೆ ಸರಿ. ಎಸಡಿಎಂನಲ್ಲಿ ಕೂಡಾ ಅಂಗನ್ಯೂನತೆ ಪ್ರಮಾಣ ಪತ್ರ ಕೊಡುತ್ತಾರೆ ಎಂದರೆ ಸಾಕ್ಷಿ ಕೊಡುತ್ತಾರೆ ಎನ್ನುತ್ತಾರೆ. ಈ ಬಗ್ಗೆ ನೀವು ಅರ್ಜಿದಾರರನ್ನು ವಿಚಾರಿಸಿದೀರಾ ಎಂದರೆ ಸಾಕ್ಷಿ ನಾನು ಕೇಳಿಲ್ಲ ಎನ್ನುತ್ತಾರೆ. ಅಂಗನ್ಯೂನತೆ ಪತ್ರ ಕೊಡಲು ಯಾರು ಚಿಕಿತ್ಸೆ ಕೊಟ್ಟಿರುತ್ತಾರೆ ಆ ವೈದ್ಯರೆ ಸಕ್ಷಮ ವೈದ್ಯರು ಎಂದರೆ ಸಾಕ್ಷಿ ಸರಿ ಅಲ್ಲ ಎನ್ನುತ್ತಾರೆ. ಏಕ್ಸರೆ ಪ್ರಕಾರ ನನ್ನ ವರದಿಯಲ್ಲಿ united fracture left tibia ಎಂಬುದಾಗಿ ಇದೆ ಎಂದರೆ ಸರಿ. ಸಾಮಾನ್ಯವಾಗಿ ಯಾವುದೇ ಒಂದು ಮೂಳೆ ಮೂರಿತ ಗುಣವಾಗಲು ಎಷ್ಟು ಅವಧಿ ತೆಗೆದುಕೊಳ್ಳುತ್ತದೆ ಎಂದರೆ ಸಾಕ್ಷಿ 2–3 ತಿಂಗಳು ಎನ್ನುತ್ತಾರೆ. ನಾನು ಆತನನ್ನು clinically ಒಂದೆ ಬಾರಿ ನೋಡಿರುತ್ತೇನೆ. 10 ರಿಂದ 12 ಪ್ರತಿಶಃತ ಎಂದು ಬರೆದಿದ್ದು ಅದು ಎನು ಎಂದರೆ ಸಾಕ್ಷಿ range of movements ಎಂದು ನುಡಿಯುತ್ತಾರೆ. ಸ್ಧ್ಯಕ್ಕೆ ಅರ್ಜಿದಾರರ ಕಾಲನಲ್ಲಿ implant ಇದೆ ಸದರಿ implant ನ್ನು ಸಾಮಾನ್ಯವಾಗಿ ಒಂದು ಅಥವಾ 2 ವರ್ಷಗಳ ನಂತರ ತೆಗೆಯುತ್ತಾರೆ. ಸದರಿ implant ತೆಗೆದ

ನಂತರ ಆತನಿಗೆ ಒಂದು ವೇಳೆ ಪೀಜೋೀಯೋಥೇರಪಿ ಮಾಡಿದ ನಂತರ ಗುಣಮುಖವಾಗಬಹುದು ಆ ನಂತರ ಆತನ ಶಾಶ್ವತ ಅಂಗನ್ಯೂನತೆ ಹೇಳಬಹುದು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಾನು ಅರ್ಜಿದಾರರ ಎಡ ಕಾಲಿಗೆ ಅಂಗನ್ಯೂನತೆ ಮಾಪನ ಮಾಡಿದ್ದು ಅದನ್ನು ಸಂಪೂರ್ಣ ದೇಹಕ್ಕೆ ಹೋಲಿಸಿದರೆ 1/3 ಬರಬಹುದು ಎಂದರೆ ಸಾಕ್ಷಿ ಬರಬಹುದು ಎನ್ನುತ್ತಾರೆ. ಅರ್ಜಿದಾರರ ವಯಸ್ಸನ್ನು ಪರಿಗಣನೆಗೆ ತೆಗೆದುಕೊಂಡರೆ ಆತನಿಗೆ ಯಾವುದೇ ರೀತಿಯ ಶಾಶ್ವತ ಅಂಗನ್ಯೂನತೆ ಉಳಿಯುವುದಿಲ್ಲ ಎಂದರೆ ಸರಿಯಲ್ಲ. ಎಸಡಿಎಂ ವೈದ್ಯರು ಬಂದು ಹೇಳಿದರೆ ಅವರಿಗೆ ಶಾಶ್ವತ ಅಂಗನ್ಯೂನತೆ ಇರುವುದಿಲ್ಲವೆಂದು ಹೇಳುತ್ತಾರೆ ನಾನು ಕೇವಲ  ಅರ್ಜಿದಾರನಿಗೆ ಸಹಾಯ ಮಾಡುವ ದೃಷ್ಟಿಯಿಂದ ಈ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆತ ಎಸಡಿಎಂನಲ್ಲಿ ಚಿಕಿತ್ಸೆ ಪಡೆದಿರುವ ಕಾರಣ ಆತನ implant ವಾಪಸ್ಸು ತೆಗೆಯಲು ನಾನು ಹೇಳಿರುವ ಅಷ್ಟು ಖರ್ಚು ಬರುವುದಿಲ್ಲವೆಂದರೆ ಸರಿಯಲ್ಲ. ನಾನು ಅರ್ಜಿದಾರನಿಗೆ ಸಹಾಯ ಮಾಡುವ ದೃಷ್ಟಿಯಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾಹುಬ್ಬಳ್ಳಿ